ಈ)

1) ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಬಾಲಕಿಯರ ಬಾಲ ಮಂದಿರವನ್ನು ದೇವದಾಸಿ ಮಕ್ಕಳ ಪುನರ್ವಸತಿಗಾಗಿ ಪ್ರಾರಂಭಿಸಲಾಗಿರುತ್ತದೆ.
2) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಬಾಲಮಂದಿರ ಗಳಲ್ಲಿ ದೇವದಾಸಿಯರ ಮಕ್ಕಳಿಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ರಕ್ಷಣೆ ಮತ್ತು ಪೋಷಣೆಗಾಗಿ ಮುಕ್ತ ಪ್ರವೇಶಾವಕಾಶವನ್ನು ಮಾಡಲಾಗಿದೆ.
3) ಇಲಾಖೆಯ ಇತರೆ ಯೋಜನಾ ಕಾರ್ಯಕ್ರಮಗಳಲ್ಲಿ ಒದಗಿಸುವ ಸೇವಾ ಸೌಲಭ್ಯಗಳನ್ನು ದೇವದಾಸಿಯರ ಮಕ್ಕಳಿಗೂ ನೀಡಲಾಗುತ್ತಿದೆ.

ಉ) 6 ರಿಂದ 14 ವಯೋಮಿತಿಯ ಎಲ್ಲ ಮಕ್ಕಳು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಒಳಪಡುತ್ತಾರೆ. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ದಿನಾಂಕ: 28-04-2012 ರಂದು ಅಧಿಸೂಚನೆ ಮೂಲಕ ಹೊರಡಿಸಲಾದ ನಿಯಮಗಳಡಿ ದೇವದಾಸಿಯರ ಮಕ್ಕಳಿಗೆ ಪ್ರತ್ಯೇಕ ಮೀಸಲಾತಿ ಇರುವುದಿಲ್ಲವಾದರೂ "Child belonging to disadvantaged group & Child belonging to weaker section" ಅಡಿಯಲ್ಲಿ ಮೀಸಲಾತಿ ನಿಗದಿಯಾಗಿರುತ್ತದೆ.

ಊ) ಶಿಕ್ಷಣ ಇಲಾಖೆಯು ದೇವದಾಸಿ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕವಾಗಿ ಆಯವ್ಯಯವನ್ನು ನಿಗದಿಪಡಿಸಿರುವುದಿಲ್ಲ. ಆದ್ದರಿಂದ ಅನುದಾನವನ್ನು ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಗ್ರಂಥಾಲಯ

565 (688) ಶ್ರೀ ನರೇಂದ್ರಬಾಬು ಸಿ.ಎ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಮಹಾಲಕ್ಷ್ಮೀ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಗ್ರಂಥಾಲಯಗಳ ಸಂಖ್ಯೆ ಎಷ್ಟು;

ಆ) ಈ ಗ್ರಂಥಾಲಯಗಳಲ್ಲಿ ದಿನಪತ್ರಿಕೆಗಳು/ನಿಯತಕಾಲಿಕೆಗಳು ಸಕಾಲಕ್ಕೆ ಓದುಗರಿಗೆ ತಲುಪದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಗ್ರಂಥಾಲಯಗಳಿಗೆ ಕಳೆದ ಮೂರು ವರ್ಷಗಳಿಂದ ಪುಸ್ತಕ ಖರೀದಿಗೆ ವೆಚ್ಚ ಮಾಡಿರುವ ಮೊತ್ತವೆಷಷ್ಟು; (ವರ್ಷವಾರು ವಿವರ ನೀಡುವುದು);

ಈ) ಗ್ರಂಥಾಲಯಗಳಲ್ಲಿನ ಹಳೇ ಪತ್ರಿಕೆಗಳು/ಪುಸ್ತಕಗಳ ವಿಲೇವಾರಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು?

ಶ್ರೀ ರೇವುನಾಯಕ್ ಬೆಳಮಗಿ (ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು) :

ಅ) ಒಟ್ಟು 9 (ಒಂಭತ್ತು)

ಆ) ಬಂದಿರುವುದಿಲ್ಲ.

ಇ) ಕಳೆ ದಮೂರು ವರ್ಷಗಳಲ್ಲಿ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಗಾಗಿ ಮಾಡಲಾದ ವೆಚ್ಚ :

2009–10	: ರೂ. 292.41 ಲಕ್ಷ
2010–11	: ರೂ. 244.94 ಲಕ್ಷ
2011–12	: ರೂ. 457.91 ಲಕ್ಷ

ಈ) ಗ್ರಂಥಾಲಯಗಳಲ್ಲಿನ ಹಳೇ ಪತ್ರಿಕೆಗಳ ವಿಲೇವಾರಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯ :

2009–10	: ರೂ. 1,51,607.00
2010–11	: ರೂ. 1,50,056.00
2011–12	: ರೂ. 1,91,289.00

(ಹಳೇ ಪುಸ್ತಕಗಳನ್ನು ವಿಲೇವಾರಿ ಮಾಡಿರುವುದಿಲ್ಲ.)